# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | | 1178 |
| ಸದಸ್ಯರ ಹೆಸರು | | ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | | 20-12-2018 |
| ಉತ್ತರಿಸಬೇಕಾದ ಸಚಿವರು | | ಉನ್ನತ ಶಿಕ್ಷಣ ಸಚಿವರು |
| ಕ್ರ. ಸಂ. | ಪ್ರಶ್ನೆ | ಉತ್ತರ |
| (ಅ) | ಉನ್ನತ ಶಿಕ್ಷಣ ಇಲಾಖೆಯು ಇತ್ತೀಚೆಗೆ (2016-218)ರ ಅವಧಿಯಲ್ಲಿ ಸಹಾಯಕ ಪ್ರಾಧ್ಯಾಪಕರ ನೇಮಕಾತಿಗಾಗಿ ಅರ್ಜಿ ಆಹ್ವಾನಿಸಿದ ದಿನಾಂಕ ಯಾವುದು; ಯಾವ ಯಾವ ವಿಷಯಗಳ ಎಷ್ಟು ಹುದ್ದೆಗಳ ನೇಮಕಾತಿಗೆ ಅಧಿಸೂಚನೆ ಹೊರಡಿಸಲಾಯಿತು; ಅಧಿಸೂಚನೆಯ ದಿನಾಂಕ ಹಾಗೂ ನೇಮಕಾತಿ ನಿಯಮಗಳು ಹಾಗೂ ಆಯ್ಕೆಗೊಂಡ ಅಭ್ಯರ್ಥಿಗಳ ಪರಿಶೀಲನಾ ಪ್ರಕ್ರಿಯೆ ಏನು;(ಅಧಿಸೂಚನೆಯ ಸಂಪೂರ್ಣ ವಿವರ ನೀಡುವುದು) | ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ದಿನಾಂಕ:22.01.2015 ಮತ್ತು 03.03.2015ರ ಅಧಿಸೂಚನೆ ಸಂಖ್ಯೆ:ಇಡಿ/ಕೆಇಎ/ಅಡ್ಮಿನ್/ಸಿಆರ್-55/2014-15 ರಲ್ಲಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿರುತ್ತದೆ.<br>ವಿಷಯವಾರು ಹುದ್ದೆಗಳ ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.<br><u>ಆಯ್ಕೆಗೊಂಡ ಅಭ್ಯರ್ಥಿಗಳ ಪರಿಶೀಲನಾ ಪ್ರಕ್ರಿಯೆ:</u><br>ಸದರಿ ಆಯ್ಕೆ ಪ್ರಕ್ರಿಯೆಯನ್ನು ನಡೆಸುವ ಉದ್ದೇಶದಿಂದ ಸರ್ಕಾರ ಅಧಿಸೂಚನೆ ಸಂಖ್ಯೆ: ಇಡಿ 300 ಡಿಸಿಇ 2013 (ಭಾಗ), ದಿನಾಂಕ: 25.10.2014 ರಲ್ಲಿ ಹೊರಡಿಸಿರುವ ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಕಾಲೇಜು ಶಿಕ್ಷಣ ಇಲಾಖೆ) (ನೇಮಕಾತಿ) (ವಿಶೇಷ) ನಿಯಮಗಳು, 2014 ರ ನಿಯಮ 9 (2) ಮತ್ತು (3) ರಲ್ಲಿ ಕೆಳಕಂಡಂತೆ ತಿಳಿಸಲಾಗಿದೆ:<br><br>9 (2): Candidates whose names are included in the final selection list prepared by the selection authority as under rule 8 may be appointed by the appointing authority in the vacancies in the order in which their names are found in the final select list after satisfying itself regarding their antecedents and after such enquiry as may be considered necessary that each of the candidate is suitable in all respect for such appointment.<br><br>9 (3): The appointing authority in respect of the final selection list shall issue appointment orders only after verification of the different certificate and marks cards.<br><br>ಯು.ಜಿ.ಸಿ.ಯು ಕಾಲಕಾಲಕ್ಕೆ ನಿಗದಿಪಡಿಸಿರುವ ನಿಯಮಾವಳಿಗಳು/ಮಾರ್ಗಸೂಚಿಗಳ ಪ್ರಕಾರ ಅಭ್ಯರ್ಥಿಗಳು ಶೈಕ್ಷಣಿಕ ವಿದ್ಯಾರ್ಹತೆಯನ್ನು ಹೊಂದಿರುತ್ತಾರೆಯೇ ಎಂಬುದನ್ನು ಮೇಲಿನ ನಿಯಮಗಳು/ಉಪನಿಯಮಗಳಲ್ಲಿ ತಿಳಿಸಿರುವಂತೆ ಪರಿಶೀಲಿಸಿ, ತದನಂತರ ಅಭ್ಯರ್ಥಿಗಳಿಗೆ ನೇಮಾಕಾತಿ ಆದೇಶವನ್ನು ನೀಡುವ ಬಗ್ಗೆ ಪರಿಶೀಲಿಸಬೇಕಾಗಿರುತ್ತದೆ. ಅದರಂತೆ ಸರ್ಕಾರ ದಿನಾಂಕ: 07.02.2017 ರಂದು ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ಇವರಿಗೆ ಪತ್ರ ಬರೆದು ಅಭ್ಯರ್ಥಿಗಳ ಶೈಕ್ಷಣಿಕ ದಾಖಲೆಗಳನ್ನು ಪರಿಶೀಲಿಸಿ ಅರ್ಹ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲು ಪ್ರಸ್ತಾವನೆಗಳನ್ನು ಸಲ್ಲಿಸಲು ಸೂಚಿಸಿರುತ್ತದೆ. ಕರ್ನಾಟಕ ಪರೀಕ್ಷಾ |

| | | |
|---|---|---|
| | | ಪ್ರಾಧಿಕಾರದ ಮೂಲಕ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಆಯ್ಕೆಗೊಂಡ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವ ಬಗ್ಗೆ ಸದರಿ ಅಭ್ಯರ್ಥಿಗಳ ಸಿಂಧುತ್ವ ಪ್ರಮಾಣ ಪತ್ರ, ಪೊಲೀಸ್ ವರದಿ, ವೈದ್ಯಕೀಯ ಪ್ರಮಾಣ ಪತ್ರ, 371(ಜೆ) ಸ್ಥಳೀಯ ಪ್ರಮಾಣ ಪತ್ರ ಹಾಗೂ ಸ್ನಾತಕೋತ್ತರ ಪದವಿಯ ಮೂಲ ಅಂಕಪಟ್ಟಿಗಳು, ಎನ್.ಇ.ಟಿ./ಕೆ-ಸೆಟ್/ಎಸ್‌ಎಲ್‌ಇಟಿ, ಪಿಹೆಚ್.ಡಿ. ಮತ್ತು ಇನ್ನಿತರ ಶೈಕ್ಷಣಿಕ ಅರ್ಹತೆಯ ಪ್ರಮಾಣಪತ್ರಗಳನ್ನು ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಗಳಿಂದ ಪಡೆದು ಅವುಗಳ ನೈಜತೆಯ ಬಗ್ಗೆ ಖಚಿತಪಡಿಸಿಕೊಂಡು ಪರಿಶೀಲಿಸಿ ವರದಿ ನೀಡಲು ಆಯುಕ್ತಾಲಯದ ಹಂತದಲ್ಲಿ, ಕಾಲೇಜು ಶಿಕ್ಷಣ ಆಯುಕ್ತರ ನೇತೃತ್ವದಲ್ಲಿ ಬೆಂಗಳೂರು, ತುಮಕೂರು ಹಾಗೂ ಮೈಸೂರು ವಿಶ್ವವಿದ್ಯಾಲಯಗಳ ಹಿರಿಯ ರಿಜಿಸ್ಟ್ರಾರ್‌ಗಳು, ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಮತ್ತು ಕಾಲೇಜು ಶಿಕ್ಷಣ ಶಿಕ್ಷಣ ಇಲಾಖೆಯ ಹೆಚ್ಚುವರಿ ನಿರ್ದೇಶಕರನ್ನೊಳಗೊಂಡ ಇಲಾಖಾ ಪರಿಶೀಲನಾ ತಂಡ/ಸಮಿತಿಯನ್ನು ರಚಿಸಲಾಗಿರುತ್ತದೆ.<br><br>ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಗಳ ಶೈಕ್ಷಣಿಕ ವಿದ್ಯಾರ್ಹತೆಯು ಆಯಾಯ ವಿಷಯಗಳಲ್ಲಿ ಬೋಧನೆ ಮಾಡಲು ನಿಗದಿಪಡಿಸಿರುವ ಶೈಕ್ಷಣಿಕ ವಿದ್ಯಾರ್ಹತೆಗೆ ಸಮನಾಂತರವಾಗಿದೆಯೇ ಎಂಬ ಬಗ್ಗೆ ಹಾಗೂ ವಿವಿಧ ವಿಶ್ವವಿದ್ಯಾಲಯಗಳಿಂದ ಪಡೆದಿರುವ ಪದವಿ/ಸ್ನಾತಕೋತ್ತರ ಪದವಿಗಳನ್ನು ನೇಮಕಾತಿಗೆ ಪರಿಗಣಿಸುವ ಬಗ್ಗೆ ಅಂತಿಮ ನಿರ್ಧಾರವನ್ನು ತೆಗೆದುಕೊಂಡು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಲು ದಿನಾಂಕ:01.07.2017ರ ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ/154/ಡಿಸಿಇ/2017ರಲ್ಲಿ ಕುಲಪತಿಗಳು, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ ಇವರ ಅಧ್ಯಕ್ಷತೆಯಲ್ಲಿ ತಜ್ಞರ ಪರಿಶೀಲನಾ ಸಮಿತಿಯನ್ನು ರಚಿಸಲಾಗಿದೆ.<br><br>ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಗಳ ಶೈಕ್ಷಣಿಕ ವಿದ್ಯಾರ್ಹತೆಯು ಆಯಾಯ ವಿಷಯಗಳಲ್ಲಿ ಬೋಧನೆ ಮಾಡಲು ನಿಗದಿಪಡಿಸಿರುವ ಶೈಕ್ಷಣಿಕ ವಿದ್ಯಾರ್ಹತೆಗೆ ಸಮನಾಂತರವಾಗಿದೆಯೇ ಎಂಬ ಬಗ್ಗೆ ಹಾಗೂ ವಿವಿಧ ವಿಶ್ವವಿದ್ಯಾಲಯಗಳಿಂದ ಪಡೆದಿರುವ ಪದವಿ/ಸ್ನಾತಕೋತ್ತರ ಪದವಿಗಳನ್ನು ನೇಮಕಾತಿಗೆ ಪರಿಗಣಿಸುವ ಬಗ್ಗೆ ಅಂತಿಮ ನಿರ್ಧಾರವನ್ನು ತೆಗೆದುಕೊಂಡು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಲು ದಿನಾಂಕ:01.07.2017ರ ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ/154/ಡಿಸಿಇ/2017ರಲ್ಲಿ ಡಾ॥ ತಿಮ್ಮೇಗೌಡ, ಕುಲಪತಿಗಳು, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ ಇವರ ಅಧ್ಯಕ್ಷತೆಯಲ್ಲಿ ಪರಿಶೀಲನಾ ಸಮಿತಿಯನ್ನು ರಚಿಸಲಾಗಿದೆ.<br><br>ತಜ್ಞರ ಸಮಿತಿಯು ಹಾಗೂ ಆಯುಕ್ತಾಲಯದ ಹಂತದ ದಾಖಲಾತಿ ಪರಿಶೀಲನಾ ಸಮಿತಿಯು ಅಭ್ಯರ್ಥಿಗಳ ಅಭ್ಯರ್ಥಿತನಕ್ಕೆ ಸಂಬಂಧಿಸಿದಂತೆ ಶೈಕ್ಷಣಿಕ ಅರ್ಹತೆ ಮತ್ತಿತರ ದಾಖಲೆಗಳು ತೃಪ್ತಿಕರವಾಗಿವೆ ಎಂದು ಅಭಿಪ್ರಾಯಿಸಿ ಅದರಂತೆ ಸರ್ಕಾರಕ್ಕೆ ವರದಿ/ಪ್ರಸ್ತಾವನೆ ಸಲ್ಲಿಸಿದ ಕೂಡಲೆ ಮುಂದಿನ ಕ್ರಮ ಕೈಗೊಂಡು ಅರ್ಹ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗುತ್ತಿದೆ. ಇದುವರೆಗೆ ಒಟ್ಟು 1917 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗಿರುತ್ತದೆ. |

| | | |
|---|---|---|
| (ಆ) | ನೇಮಕಾತಿಗೆ ಪರೀಕ್ಷೆಯನ್ನು ನಡೆಸಿದ್ದು, ಯಾವಾಗ; ಸದರಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ವಿಷಯವಾರು ಆಯ್ಕೆಯಾದ ಅಭ್ಯರ್ಥಿಗಳ ಸಂಖ್ಯೆ ಎಷ್ಟು ಮತ್ತು ಯಾರು ಯಾರು; (ವಿವರ ನೀಡುವುದು) | ವಿವಿಧ ವಿಷಯಗಳ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ದಿನಾಂಕ:02.03.2016 ರಿಂದ 06.03.2016ರವರೆಗೆ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಿದೆ.<br><br>ಸದರಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಆಯ್ಕೆಯಾದ ಅಭ್ಯರ್ಥಿಗಳ ಸಂಖ್ಯೆ–2034. ಅಭ್ಯರ್ಥಿಗಳ ವಿಷಯವಾರು ವಿವರಗಳನ್ನು ಅನುಬಂಧ–2ರಲ್ಲಿ ನೀಡಲಾಗಿದೆ. |
| ಇ) | ಇದರಲ್ಲಿ ಎಷ್ಟು ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗಿದೆ; ಯಾವ ಯಾವ ದಿನಾಂಕದಂದು ನೀಡಲಾಗಿದೆ; ನೇಮಕಾತಿ ಆದೇಶ ನೀಡಿದ ಅಭ್ಯರ್ಥಿಗಳ ಶೈಕ್ಷಣಿಕ ವಿವರಗಳನ್ನು ನೀಡುವುದು; | ಇದರಲ್ಲಿ ಇದುವರೆವಿಗೂ 1917 ಅರ್ಹ ಅಭ್ಯರ್ಥಿಗಳಿಗೆ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ನೇಮಕಾತಿ ಆದೇಶವನ್ನು ಹೊರಡಿಸಿದೆ.<br><br>ನೇಮಕಾತಿ ಆದೇಶ ನೀಡಿದ ದಿನಾಂಕ ಹಾಗೂ ಅಭ್ಯರ್ಥಿಗಳ ಶೈಕ್ಷಣಿಕ ವಿವರಗಳನ್ನು ಅನುಬಂಧ–3ರಲ್ಲಿ ನೀಡಲಾಗಿದೆ. |
| ಈ) | ನೇಮಕಾತಿ ಆದೇಶ ನೀಡುವ ಸಂದರ್ಭದಲ್ಲಿ ಉಂಟಾದ ತೊಂದರೆಗಳು ಹಾಗೂ ಅಭ್ಯರ್ಥಿಗಳ ಶಿಕ್ಷಣದ ಕುರಿತು ಉಂಟಾದ ಗೊಂದಲಗಳೇನು; (ವಿವರ ನೀಡುವುದು) | ಯಾವುದು ಇಲ್ಲ. |
| ಉ) | ರಾಜ್ಯದ ಒಳಗಿನ ದೂರ ಶಿಕ್ಷಣ ಹಾಗೂ ಹೊರಗಿನ ರಾಜ್ಯದ ದೂರ ಶಿಕ್ಷಣ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ನೇಮಕಾತಿ ಆದೇಶ ಪಡೆದಿರುವ ಅಭ್ಯರ್ಥಿಗಳ ಸಂಖ್ಯೆ ಎಷ್ಟು ಮತ್ತು ಯಾರು ಯಾರು; ಅವರು ಶಿಕ್ಷಣ ಪಡೆದ ವಿಶ್ವವಿದ್ಯಾಲಯಗಳ ಹೆಸರು ವಿಳಾಸ ಇವೆಲ್ಲದರ ಸಂಪೂರ್ಣ ಮಾಹಿತಿ ನೀಡುವುದು; ಅವರಿಗೆ ನೇಮಕಾತಿ ಆದೇಶ ನೀಡುವ ಮೊದಲು ನಡೆಸಿದ ಪರಿಶೀಲನಾ ಪ್ರಕ್ರಿಯೆಯ ಮಾಹಿತಿ ನೀಡುವುದು; | 1) ರಾಜ್ಯದ ಒಳಗಿನ ದೂರ ಶಿಕ್ಷಣ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ನೇಮಕಾತಿ ಆದೇಶ (ನಿಗಧಿತ ವಿದ್ಯಾರ್ಹತೆ) ಪಡೆದಿರುವ ಅಭ್ಯರ್ಥಿಗಳ ಪಟ್ಟಿ ವಿಶ್ವವಿದ್ಯಾಲಯಗಳ ಹೆಸರು ಒಳಗೊಂಡಂತೆ ಅನುಬಂಧ–4ರಲ್ಲಿ ನೀಡಲಾಗಿದೆ.<br><br>2) ಹೊರರಾಜ್ಯಗಳಿಂದ ದೂರ ಶಿಕ್ಷಣದ ಮೂಲಕ ವಿದ್ಯಾರ್ಹತೆ ಹೊಂದಿರುವ 24 ಅಭ್ಯರ್ಥಿಗಳನ್ನು ನೇಮಕಾತಿಗೆ ಪರಿಗಣಿಸುವ ಸಂಬಂಧ ತಜ್ಞರ ಪರಿಶೀಲನಾ ಸಮಿತಿಯು ಅಭ್ಯರ್ಥಿಗಳ ಶೈಕ್ಷಣಿಕ ದಾಖಲೆಗಳ ನೈಜತೆಯನ್ನು ದೃಢಪಡಿಸಿಕೊಳ್ಳಲು ನಿಗಧಿಪಡಿಸಿರುವ ನಮೂನೆಯಲ್ಲಿ ಸಂಬಂಧಪಟ್ಟ ವಿಶ್ವವಿದ್ಯಾಲಯಗಳಿಂದ ಮಾಹಿತಿಯನ್ನು ಕೋರಲಾಗಿ, 09 ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಮಾಹಿತಿ ಸ್ವೀಕೃತವಾಗಿರುತ್ತದೆ. ಸದರಿ 09 ಅಭ್ಯರ್ಥಿಗಳನ್ನು ನೇಮಕಾತಿಗೆ ಶಿಫಾರಸ್ಸು ಮಾಡಿದ್ದು, ಸದರಿ 09 ಅಭ್ಯರ್ಥಿಗಳಲ್ಲಿ ಅಗತ್ಯ ದಾಖಲಾತಿಗಳಾದ ಸಿಂಧುತ್ವ, ಗ್ರಾಮೀಣ, ಕನ್ನಡ ಮಾಧ್ಯಮ, ಪೋಲೀಸ್ ವರದಿ, ಇತ್ಯಾದಿ ಸ್ವೀಕೃತಗೊಂಡ 06 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತದೆ.<br><br>3) ಉಳಿದ 03 ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಅಗತ್ಯ ದಾಖಲಾತಿಗಳು ಸ್ವೀಕೃತಗೊಳ್ಳದಿರುವುದರಿಂದ (ಸಿಂಧುತ್ವ, ಗ್ರಾಮೀಣ ಇತ್ಯಾದಿ) ಸದರಿ ದಾಖಲಾತಿಗಳನ್ನು ಪಡೆಯಲು ಸಕ್ಷಮ ಪ್ರಾಧಿಕಾರಗಳಿಗೆ ಪತ್ರಗಳನ್ನು ಬರೆಯಲಾಗಿದೆ.<br><br>4) ಇನ್ನುಳಿದ 15 ಅಭ್ಯರ್ಥಗಳಲ್ಲಿ 06 ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಸಂಬಂಧಪಟ್ಟ ವಿಶ್ವವಿದ್ಯಾಲಯಗಳಿಂದ ನಿಗಧಿತ ಮಾಹಿತಿ ಬಾರದೇ ಇರುವುದರಿಂದ ಸಂಬಂಧಿತ ವಿಶ್ವವಿದ್ಯಾಲಯಗಳಿಗೆ ಮತ್ತೊಮ್ಮೆ ಅರೆ ಸರ್ಕಾರಿ ಪತ್ರವನ್ನು ಬರೆದು ಮಾಹಿತಿಯನ್ನು ಒದಗಿಸುವಂತೆ ಕೋರಲಾಗಿರುತ್ತದೆ. |

| | | |
|---|---|---|
| | | 5) 07 ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಮಾಹಿತಿ ಸ್ವೀಕೃತಗೊಂಡಿರುವುದಿಲ್ಲ.<br>6) ಇನ್ನುಳಿದ 02 ಅಭ್ಯರ್ಥಿಗಳು ನಿಗದಿತ ವಿದ್ಯಾರ್ಹತೆಯನ್ನು ಹೊಂದಿಲ್ಲವಾದ್ದರಿಂದ ಅವರನ್ನು ನೇಮಕಾತಿ ಆದೇಶ ನೀಡಲು ಪರಿಗಣಿಸಲು ಅವಕಾಶವಿಲ್ಲವೆಂದು ವರದಿಯಿದ್ದು, ಪರಿಶೀಲಿಸಲಾಗುತ್ತದೆ.<br>7) ಹೊರರಾಜ್ಯದ ವಿಶ್ವವಿದ್ಯಾಲಯಗಳಿಂದ ಪದವಿ ಪಡೆದಿದ್ದು, ತೃಪ್ತಿಕರ ವರದಿ ಬಾರದೇ ಇರುವಂತಹ ಉಳಿದ 13 ಅಭ್ಯರ್ಥಿಗಳು ಹಾಗೂ ಮೇಲೆ ಉಪಕಂಡಿಕೆ (6) ರಲ್ಲಿ ತಿಳಿಸಿರುವ 02 ಅಭ್ಯರ್ಥಿಗಳಲ್ಲಿ ಒಬ್ಬ ಅಭ್ಯರ್ಥಿಯನ್ನು ನೇಮಕಾತಿಗೆ ಪರಿಗಣಿಸುವ ಬಗ್ಗೆ ಸ್ಪಷ್ಟ ಅಭಿಪ್ರಾಯದೊಂದಿಗೆ ವರದಿ ನೀಡುವಂತೆ ದಿನಾಂಕ: 29.10 2018 ರಂದು ಈ ಕುರಿತು ಜರುಗಿಸಿದ್ದ ಸಭೆಯಲ್ಲಿ ಸೂಚನೆಯನ್ನು ನೀಡಲಾಗಿದೆ. ತಜ್ಞರ ಸಮಿತಿಯ ವರದಿ ಸ್ವೀಕೃತವಾದ ಕೂಡಲೆ ನಿಯಮಾನುಸಾರ ಮುಂದಿನ ಅಗತ್ಯ ಕ್ರಮ ಕೈಗೊಳ್ಳಲಾಗುವುದು. |
| **ಊ)** | ಹೊರಗಿನ ರಾಜ್ಯದ ದೂರ ಶಿಕ್ಷಣ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ನೇಮಕಾತಿ ಆದೇಶ ಪಡೆದಿರುವ ಅಭ್ಯರ್ಥಿಗಳ ಸಂಖ್ಯೆ ಎಷ್ಟು ಮತ್ತು ಯಾರು ಯಾರು ಅವರು ಶಿಕ್ಷಣ ಪಡೆದ ವಿಶ್ವ ವಿದ್ಯಾಲಯಗಳ ಹೆಸರು ವಿಳಾಸ ಇವೆಲ್ಲದರ ಸಂಪೂರ್ಣ ಮಾಹಿತಿ ನೀಡುವುದು ಹಾಗೂ ಅವರುಗಳಿಗೆ ನೇಮಕಾತಿ ಆದೇಶ ನೀಡುವ ಮೊದಲು ಅವರುಗಳ ಶೈಕ್ಷಣಿಕ ದಾಖಲೆ ಪರಿಶೀಲನಾ ಪ್ರಕ್ರಿಯೆಯ ಮಾಹಿತಿ ನೀಡುವುದು | ಕ್ರಮ ಸಂಖ್ಯೆ (ಉ) ರಲ್ಲಿ ಉತ್ತರಿಸಿರುವಂತೆ |
| **ಋ)** | ದೂರ ಶಿಕ್ಷಣದ ಮೂಲಕ ಶಿಕ್ಷಣ ಪಡೆದು ಆಯ್ಕೆಗೊಂಡ ಅಭ್ಯರ್ಥಿಗಳ ಪರಿಶೀಲನಾ ಸಂದರ್ಭದಲ್ಲಿ 12 ಅಂಶಗಳ ಮಾಹಿತಿಯನ್ನು ಅವರ ವಿಶ್ವ ವಿದ್ಯಾಲಯಗಳಿಂದ ಪಡೆಯಲಾಗಿದೆಯೇ: | ಹೊರಗಿನ ರಾಜ್ಯದ ವಿಶ್ವವಿದ್ಯಾಲಯಗಳಿಂದ ದೂರ ಶಿಕ್ಷಣದ ಮೂಲಕ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳನ್ನು ನೇಮಕಾತಿಗೆ ಪರಿಗಣಿಸುವ ಸಂಬಂಧ ಕೂಲಂಕಷವಾಗಿ ಪರಿಶೀಲಿಸಿ ಸ್ಪಷ್ಟ ಅಭಿಪ್ರಾಯದೊಂದಿಗೆ ವರದಿ ನೀಡುವಂತೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ತಜ್ಞರ ಪರಿಶೀಲನಾ ಸಮಿತಿ ಹಾಗೂ ಆಯುಕ್ತಾಲಯದ ದಾಖಲಾತಿ ಪರಿಶೀಲನಾ ಸಮಿತಿಗಳಿಗೆ ಸೂಚಿಸಿದ ಮೇರೆಗೆ ಹೊರರಾಜ್ಯದ ದೂರ ಶಿಕ್ಷಣದ ಮೂಲಕ ವಿದ್ಯಾರ್ಹತೆ ಹೊಂದಿರುವ 24 ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ದೂರ ಶಿಕ್ಷಣದ ಮೂಲಕ ಸ್ನಾತಕೋತ್ತರ ಪದವಿ ಪಡೆಯಲು ಅನುಸರಿಸಬೇಕಾದ ಎಲ್ಲಾ ಪ್ರಕ್ರಿಯೆಗಳನ್ನು ಪಾಲಿಸಿರುವ ಬಗ್ಗೆ 12 ಅಂಶಗಳ ಮಾಹಿತಿಯನ್ನು ಪಡೆಯಲು ತಜ್ಞರ ಪರಿಶೀಲನಾ ಸಮಿತಿಯು ದಿನಾಂಕ:17.03.2018 ರಂದು ನಡೆದ ಸಭೆಯಲ್ಲಿ ನಿರ್ಧರಿಸಿರುತ್ತದೆ. ಸದರಿ ಸಮಿತಿಯ ನಿರ್ಣಯದಂತೆ ಸಂಬಂಧಪಟ್ಟ ವಿಶ್ವವಿದ್ಯಾಲಯಗಳಿಂದ ಮಾಹಿತಿಯನ್ನು ಪಡೆಯಲು ಕ್ರಮವಹಿಸಲಾಗಿದೆ.<br>ತಜ್ಞರ ಪರಿಶೀಲನಾ ಸಮಿತಿಯ ಶಿಫಾರಸ್ಸಿನಂತೆ ಹೊರರಾಜ್ಯದ ವಿಶ್ವವಿದ್ಯಾಲಯಗಳಿಂದ ಮಾಹಿತಿ ಪಡೆದು ಕೈಗೊಂಡ ಕ್ರಮದ ಮಾಹಿತಿಯನ್ನು ಉಪ-ಪ್ರಶ್ನೆ (ಉ) ಗೆ ಉತ್ತರದಲ್ಲಿ ನೀಡಿದೆ. |

| | | |
|---|---|---|
| ಎ) | ಈ ನೇಮಕಾತಿಗೆ ಉನ್ನತ ಶಿಕ್ಷಣ ಪರಿಷತ್ತಿನ ಸಮಿತಿ ರಚಿಸಲಾಗಿದೆಯೇ; ಸಮಿತಿಯು ದೂರ ಶಿಕ್ಷಣದಲ್ಲಿ ವಿದ್ಯಾರ್ಹತೆ ಪಡೆದ ಅಭ್ಯರ್ಥಿಗಳ ಅರ್ಹತೆ ಸಂಬಂಧ ಈವರೆಗೂ ನೀಡಿದ ವರದಿಗಳ ಸಂಪೂರ್ಣ ವಿವರ ಹಾಗೂ ವರದಿಯ ಪ್ರತಿ ನೀಡುವುದು; | ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಗಳ ಶೈಕ್ಷಣಿಕ ವಿದ್ಯಾರ್ಹತೆಯು ಆಯಾಯ ವಿಷಯಗಳಲ್ಲಿ ಬೋಧನೆ ಮಾಡಲು ನಿಗದಿಪಡಿಸಿರುವ ಶೈಕ್ಷಣಿಕ ವಿದ್ಯಾರ್ಹತೆಗೆ ಸಮನಾಂತರವಾಗಿದೆಯೇ ಎಂಬ ಬಗ್ಗೆ ಹಾಗೂ ವಿವಿಧ ವಿಶ್ವವಿದ್ಯಾಲಯಗಳಿಂದ ಪಡೆದಿರುವ ಪದವಿ/ಸ್ನಾತಕೋತ್ತರ ಪದವಿಗಳನ್ನು ನೇಮಕಾತಿಗೆ ಪರಿಗಣಿಸುವ ಬಗ್ಗೆ ಅಂತಿಮ ನಿರ್ಧಾರವನ್ನು ತೆಗೆದುಕೊಂಡು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಲು ದಿನಾಂಕ:01.07.2017ರ ಸರ್ಕಾರದ ಅಧಿಸೂಚನೆ ಇಡಿ/154/ಡಿಸಿಇ/2017ರಲ್ಲಿ ಡಾ॥ತಿಮ್ಮೇಗೌಡ, ಕುಲಪತಿಗಳು, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ ಇವರ ಅಧ್ಯಕ್ಷತೆಯಲ್ಲಿ ಪರಿಶೀಲನಾ ಸಮಿತಿಯನ್ನು ರಚಿಸಲಾಗಿದೆ.<br>ಸದರಿ ಸಮಿತಿಯು ದೂರ ಶಿಕ್ಷಣದಲ್ಲಿ ವಿದ್ಯಾರ್ಹತೆ ಪಡೆದ ಅಭ್ಯರ್ಥಿಗಳ ಅರ್ಹತೆ ಸಂಬಂಧ ಈವರೆಗೂ ನೀಡಿದ ವರದಿಗಳ ಪ್ರತಿಗಳನ್ನು ಅನುಬಂಧ–5ರಲ್ಲಿ ನೀಡಲಾಗಿದೆ. |
| ಏ) | ದೂರ ಶಿಕ್ಷಣ ಮೂಲಕ ಶಿಕ್ಷಣ ಪಡೆದ ಹಾಗೂ ಆಯ್ಕೆಗೊಂಡ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲು ಇರುವ ಅಡೆತಡೆಗಳೇನು; ಇವರಿಗೆ ನೇಮಕಾತಿ ಆದೇಶವನ್ನು ಯಾವಾಗ ನೀಡಲಾಗುವುದು; | 1) ದೂರ ಶಿಕ್ಷಣದ ಮೂಲಕ ಶಿಕ್ಷಣ ಪಡೆದು ಆಯ್ಕೆಗೊಂಡ ಅಭ್ಯರ್ಥಿಗಳ ಶೈಕ್ಷಣಿಕ ಹಾಗೂ ಇನ್ನಿತರೆ ಪ್ರಮಾಣ ಪತ್ರಗಳನ್ನು ಪರಿಶೀಲನಾ ತಂಡಗಳ ಹಾಗೂ ಸಂಬಂಧಪಟ್ಟ ವಿಶ್ವವಿದ್ಯಾಲಯಗಳು ಸಕ್ಷಮ ಪ್ರಾಧಿಕಾರಿಗಳು ನೀಡಿರುವ ನೈಜತೆಯ ವರದಿಯನ್ನು ಆಧರಿಸಿ ಈಗಾಗಲೇ ನೇಮಕಾತಿ ಆದೇಶಗಳನ್ನು ಹೊರಡಿಸಲಾಗಿದೆ.<br><br>2) ಉಳಿದಂತೆ, ಹೊರ ರಾಜ್ಯದ ದೂರ ಶಿಕ್ಷಣದ ಮೂಲಕ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವ ಸಂಬಂಧ ವಿವರಗಳನ್ನು ಕ್ರಮ ಸಂಖ್ಯೆ ಉ(ಬಿ) ರಲ್ಲಿ ವಿವರಿಸಲಾಗಿದೆ. |

(ಜಿ.ಟಿ. ದೇವೇಗೌಡ)

ಉನ್ನತ ಶಿಕ್ಷಣ ಸಚಿವರು

**ಇಡಿ 338 ಡಿಸಿಇ 2018**

ಅನುಬಂಧ-1

ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಭರ್ತಿ ಮಾಡಲು ಪ್ರಸ್ತಾಪಿಸಿರುವ ವಿಷಯವಾರು ಹುದ್ದೆಗಳ ಸಂಖ್ಯೆ

| ಕ್ರಮ ಸಂಖ್ಯೆ | ವಿಷಯ | ಇಲಾಖೆಯಿಂದ ಭರ್ತಿ ಮಾಡಲು ನೀಡಿರುವ ಹುದ್ದೆಗಳ ಸಂಖ್ಯೆ | ಕರ್ನಾಟಕ ಪರಿಕ್ಷಾ ಪ್ರಾಧಿಕಾರ ಆಯ್ಕೆಮಾಡಿರುವ ಅಭ್ಯರ್ಥಿಗಳ ಸಂಖ್ಯೆ |
|---|---|---|---|
| 1 | ಕನ್ನಡ | 323 | 322 |
| 2 | ಇಂಗ್ಲೀಷ್ | 250 | 213 |
| 3 | ಹಿಂದಿ | 22 | 19 |
| 4 | ಉರ್ದು | 13 | 7 |
| 5 | ಸಮಾಜಶಾಸ್ತ್ರ | 64 | 64 |
| 6 | ಇತಿಹಾಸ | 132 | 131 |
| 7 | ಮನಃಶಾಸ್ತ್ರ | 17 | 17 |
| 8 | ಅರ್ಥಶಾಸ್ತ್ರ | 132 | 132 |
| 9 | ರಾಜ್ಯಶಾಸ್ತ್ರ | 129 | 128 |
| 10 | ಭೂಗೋಳಶಾಸ್ತ್ರ | 24 | 24 |
| 11 | ವಾಣಿಜ್ಯಶಾಸ್ತ್ರ | 577 | 550 |
| 12 | ಪತ್ರಿಕೋದ್ಯಮ | 8 | 8 |
| 13 | ಸಮಾಜಕಾರ್ಯ | 63 | 62 |
| 14 | ನಿರ್ವಾಹಣಶಾಸ್ತ್ರ | 160 | 143 |
| 15 | ಭೌತಶಾಸ್ತ್ರ | 45 | 43 |
| 16 | ರಸಾಯನಶಾಸ್ತ್ರ | 28 | 24 |
| 17 | ಗಣಿತಶಾಸ್ತ್ರ | 31 | 28 |
| 18 | ಗಣಕವಿಜ್ಞಾನ | 109 | 89 |
| 19 | ಪ್ರಾಣಿಶಾಸ್ತ್ರ | 15 | 15 |
| 20 | ಅಪರಾಧಶಾಸ್ತ್ರ | 5 | 5 |
| 21 | ಫ್ಯಾಷನ್ ಟೆಕ್ನಾಲಜಿ | 3 | 0 |
| 22 | ಪ್ರವಾಸೋಧ್ಯಮ | 2 | 2 |
| 23 | ಎಲೆಕ್ಟ್ರಾನಿಕ್ಸ್ | 3 | 3 |
| 24 | ಗೃಹವಿಜ್ಞಾನ | 5 | 5 |
| | **ಒಟ್ಟು** | **2160** | **2034** |

ಕಾಲೇಜು ಶಿಕ್ಷಣ ಮುಖ್ಯ ಆಡಳಿತಾಧಿಕಾರಿಗಳು